ಇಂದು ದಿನಾಂಕಃ 19.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

<u>**ಪಾಟೀ ಸವಾಲುಃ**</u> ವಾದಿಯ ಪರ ಶ್ರೀ ಎಸ್ ಆರ್ ಎ ವಕೀಲರಿಂದಃ

ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಬರೆಯಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾನು 37 ಗುಂಟೆ ಜಮೀನನ್ನುಖರೀದಿ ಮಾಡಿದ್ದು ಆ ಬಗ್ಗೆ ನಾನು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ಸದರಿ 37 ಗುಂಟೆ ಜಮೀನನ್ನು ಪ್ರತಿವಾದಿ 4 ರವರಿಂದ ಖರೀದಿ ಮಾಡಿರುತ್ತೇನೆ. ಸದರಿ ಜಮೀನನ್ನು ಖರೀದಿ ಮಾಡಿರುವ ದಿನಾಂಕ ನನಗೆ ನೆನಪಿರುವುದಿಲ್ಲ. ಸದರಿ ಖರೀದಿ ಮಾತುಕತೆ ನಮ್ಮ ಊರಿನ ಪಂಚರ ಸಮಕ್ಷಮದಲ್ಲಿ ಆಗಿರುತ್ತದೆ. ಆ ರೀತಿ ಪಂಚರು ಎಂದರೆ ಗಣೇಶಪ್ಪ ಹೊಳಿಯಪ್ಪ ಒಡೇನಪುರ, ಸಿದ್ದನಗೌಡಪ್ಪ ಕದರಮಂಡಲಗಿ, ಗಿರಿಯಪ್ಪ ಒಡೇನಪುರ ಹಾಗೂ ನಾನು ಮತ್ತು ಹೊಲವನ್ನು ಮಾರಾಟ ಮಾಡಿದ ಮಾರಾಟಗಾರರು ಇದ್ದೆವು. ಸದರಿ ಖರೀದಿ ಮಾತುಕತೆ ಸಿದ್ದನಗೌಡಪ್ಪ ಕದರಮಂಡಲಗಿ ರವರ ಮನೆಯಲ್ಲಿ ನಡೆದಿರುತ್ತದೆ. ಸದರಿ ಜಮೀನನ್ನು ಎಷ್ಟು ಮೊತ್ತಕ್ಕೆ ಮಾರಾಟ ಮಾಡಲು ಹೇಳಿರುತ್ತಾರೆ ಹಾಗೂ ನಾವು ಎಷ್ಟು ಹಣ ಕೊಡಲು ಹೇಳಿರುತ್ತೇವೆ ಎಂಬುದರ ಬಗ್ಗೆ ನನಗೆ ಈಗ ನೆನಪಿರುವುದಿಲ್ಲ. ಆ ರೀತಿ ಮಾತುಕತೆ ನಡೆದ ಎಷ್ಟು ದಿನಗಳ ನಂತರ ನಾವು ಕ್ರಯ ಪತ್ರವನ್ನು ಮಾಡಿಸಿಕೊಂಡೆವು ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ವಿಚಾರಗಳನ್ನು ಹೊರತುಪಡಿಸಿ ಬೇರೆ ಯಾವುದೇ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನಾನು ಖರೀದಿ ಪಡೆದು ಪೂರ್ವದಲ್ಲಿನ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಆಸ್ತಿಯನ್ನು ಮಾರಾಟ ಮಾಡಲು 4 ನೇ ಪ್ರತಿವಾದಿಗೆ ಮಾರಾಟ ಮಾಡಲು ಹಕ್ಕೇ ಇರಲಿಲ್ಲ ಎಂದರೆ ಸರಿಯಲ್ಲ. ಖರೀದಿ ಕ್ರಯ ಪತ್ರವನ್ನು ನಾವು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.